# ಚತುರ ಬೇಟೆಗಾರ ಕಸಾಯಿ ಪಕ್ಷಿ!





ಚಿತ್ರ– ಬರಹ: **ಪ್ರಕಾಶ ಎಸ್. ಮನ್ನಂಗಿ**

**ಕ**ಳಿಂಗ ಪಕ್ಷಿ ಆಹಾರ ಸೇವಿಸುವ ಪದ್ಧತಿ ಅತ್ಯಂತ ವಿಲಕ್ಷಣ. ತನ್ನ ಬೇಟೆಯಾದ ಹುಳು ಹುಪ್ಪಡಿ, ಮಿಡತೆ, ಇಲಿಗಳನ್ನು ಬೆನ್ನಟ್ಟಿಕೊಂಡು ಹೋಗಿ ಬೇಟೆಯಾಡಿ ತಕ್ಷಣ ತಿನ್ನುವುದಿಲ್ಲ. ಅದನ್ನು ತಾನು ಮೊದಲು ಕುಳಿತ ಜಾಗೆಗೇ ತಂದು ಗಿಡ ಕಂಟಿಗಳ ಮುಳ್ಳಿಗೆ ಚುಚ್ಚಿ ಸಿಗಿಸುತ್ತದೆ. ಮತ್ತೆ ತನಗೆ ಬೇಕಾದಾಗ ಅದನ್ನು ತಿನ್ನುತ್ತದೆ.

ಹೀಗಾಗಿಯೇ ಇದನ್ನು 'ಬುಚರ್ ಬರ್ಡ್' (ಕಸಾಯಿ ಪಕ್ಷಿ) ಎಂದು ಕರೆಯುವರು. ಲ್ಯಾನಿಡೇ ಕುಟುಂಬಕ್ಕೆ ಸೇರಿದ್ದು, ಲ್ಯಾನಿಯಸ್ ಗುಂಪಿನದ್ದು. ಲ್ಯಾನಿಯಸ್ ಮೆರಿಡಿಯೋನಾಲಿಸ್, ಲ್ಯಾನಿಯಸ್ ಸ್ಕಾಕ್ ಎಂಬ ಪ್ರಭೇದಗಳಿವೆ. ಲ್ಯಾಟಿನ್ ಭಾಷೆಯಲ್ಲಿ ಲ್ಯಾನಿಯಸ್ ಎಂದರೆ ಕಟುಕ ಎಂದರ್ಥ. ಆಂಗ್ಲ ಭಾಷೆಯಲ್ಲಿ ಶ್ರೈಕ್ ಎನ್ನುವರು, ಅಂದರೆ ಚೀರು ಧ್ವನಿ ಎಂದರ್ಥ. ಕನ್ನಡದಲ್ಲಿ ಕಳಿಂಗ ಪಕ್ಷಿ ಎಂಬ ಹೆಸರೂ ಇದೆ.

ಇದರ ತಲೆ, ಕತ್ತಿನ ಹಿಂಭಾಗ ಬೂದು, ಎದೆ, ಹೊಟ್ಟೆಯಲ್ಲಿ ಬಿಳಿ ಬಣ್ಣವಿದೆ. ರೆಕ್ಕೆ, ಬಾಲ ಕಪ್ಪು ಬಣ್ಣದಿಂದ ಕೂಡಿದೆ. 70 ಗ್ರಾಂ ತೂಗುತ್ತದೆ. 25 ಸೆಂ.ಮೀ. ಉದ್ದವಿರುತ್ತದೆ. ಮಾಂಸವನ್ನು ಹರಿದು ತಿನ್ನಲು ಗಟ್ಟಿಮುಟ್ಟಾದ ಕೊಕ್ಕು ಇದೆ. ದೃಢವಾದ ಕಾಲು, ಉಗುರುಗಳಿವೆ.

ಪರಸ್ಪರ ಗಂಡು– ಹೆಣ್ಣುಗಳು ತಮ್ಮ ಸಂಗಾತಿಯನ್ನು ಹುಡುಕಿಕೊಳ್ಳಲು ಯತ್ನಿಸುತ್ತವೆ. ಗಂಡು ಹೆಣ್ಣಿಗೆ ಇಷ್ಟವಾಗಬಹುದಾದ ಆಹಾರವನ್ನು ಪ್ರೇಮದ ಕಾಣಿಕೆಯಾಗಿ ನೀಡುತ್ತದೆ. ಕಾಣಿಕೆ ನೀಡುವಾಗ ಎಡ ಬಲಕ್ಕೆ ವಾಲುತ್ತ ನೃತ್ಯ ಮಾಡುತ್ತ ಹೆಣ್ಣಿನ ಬಳಿ ಸಾಗುತ್ತದೆ. ಹೆಣ್ಣಿಗೆ ಗಂಡು ಇಷ್ಟವಾದರೆ ಕಾಣಿಕೆಯನ್ನು ಸ್ವೀಕರಿಸುತ್ತದೆ. ನಸು ನಾಚುತ್ತ ಹೆಣ್ಣು ಗಂಡಿನ ಪಕ್ಕ ಬಂದಾಗ ಕೂಡುತ್ತವೆ. ಗರ್ಭಿಣಿ ಹೆಣ್ಣಿನ ಪೋಷಣೆಯ ಜವಾಬ್ದಾರಿಯನ್ನು ಗಂಡು ಹೊತ್ತುಕೊಳ್ಳುತ್ತದೆ.

ನೆಲವಾಸಿ ವೈರಿಗಳ ಕೈಗೆ ಎಟುಕದಂತೆ ನೆಲದಿಂದ ಎರಡು ಅಡಿ ಮೇಲೆ ಗಿಡದ ಟೊಂಗೆಯೊಂದರಲ್ಲಿ ಗೂಡನ್ನು ಏಪ್ರಿಲ್– ಮೇ ತಿಂಗಳಲ್ಲಿ ಕಟ್ಟುತ್ತವೆ. ಹೊರವ್ಯಾಸ 28 ಸೆಂ.ಮೀ. ಇರುವ ಗೂಡಿನಲ್ಲಿ 3–9 ತತ್ತಿಗಳನ್ನಿಡುತ್ತದೆ. ತತ್ತಿಗಳಿಗೆ 16 ದಿನಗಳ ಕಾಲ ಕಾವು ಕೊಡುತ್ತದೆ. ಜೂನ್–ಜುಲೈ ಹೊತ್ತಿಗೆ ಮರಿಗಳು ಸ್ವತಂತ್ರವಾಗಿ ಹಾರಿ ಹೋಗುತ್ತವೆ.

ಕೋಗಿಲೆಗಳು ಇವುಗಳ ಗೂಡಿನಲ್ಲಿರುವ ತತ್ತಿಗಳನ್ನು ತಿನ್ನುತ್ತಿರುವುದರಿಂದ ಮತ್ತು ವಾಸಸ್ಥಾನ ಕ್ಷೀಣಿಸುತ್ತಿರುವುದರಿಂದ ಇವು ವಿನಾಶದ ಅಂಚನ್ನು ತಲುಪಿವೆ.